ದಿ.03-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು ಶ್ರೀ ಎನ್.ವಿ.ಜಿ ವಕೀಲರಿಂದ:-</u>**

ಈ ದಾವೆಯನ್ನು ಹೊಲದ ಸರ್ವೆ ನಂ.606 ಕ್ಕೆ ಸಂಬಂಧಿಸಿದಂತೆ ಹಾಕಿರುತ್ತಾರೆ. ಸರ್ವೆ ನಂ.606 ಕ್ಕೆ ಈ ಕೇಸು ಹಾಕಿರುತ್ತಾರೆ ಎಂದು ನಮ್ಮ ತಂದೆ ತಿಳಿಸಿರುತ್ತಾರೆ. ಜಿ.ಪಿ.ಎ ಪ್ರತಿಗೆ ನಮ್ಮ ತಂದೆಯವರು ಸಹಿ ಮಾಡಿರುತ್ತಾರೆ. ಸ್ಟ್ಯಾಂಪ್ ಪೇಪರನ್ನು ನಾನೇ ತಂದಿರುತ್ತೇನೆ. ನಮ್ಮ ತಂದೆಗೆ ವಯಸ್ಸಾಗಿದ್ದರಿಂದ ಕೇಸು ನಡೆಸಲು ಆಗದೆ ಇರುವುದರಿಂದ ಜಿ.ಪಿ.ಎ ಪಡೆದಿರುತ್ತೇನೆ. ನಾನು 3ನೇ ತರಗತಿವರೆಗೆ ಓದಿರುತ್ತೇನೆ. ಜಿ.ಪಿ.ಎ ಸ್ಟ್ಯಾಂಪ್ ಪೇಪರ್ ಮೇಲೆ ಸೇಲ್ ಅಗ್ರಿಮೆಂಟ್ ಎಂದು ಬರೆದಿದೆ ಎಂದು ಬರೆದಿದೆ ಎಂದರೆ ಸರಿ. ಶಶಿಧರ ತಂದೆ ವೆಂಕಣ್ಣ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಸ್ಟ್ಯಾಂಪ್ ಪೇಪರ್ ಶಶಿಧರ ಮತ್ತು ಹುಲಗಪ್ಪ ತಂದೆ ರಾಮಣ್ಣನವರ ನಡುವಿನ ಖರೀದಿ ಕರಾರು ಪತ್ರಕ್ಕೆ ತಂದ ಪೇಪರ್ ಎಂದರೆ ಸರಿ. ನನಗೆ ನಮ್ಮ ತಂದೆಯವರ ಪರವಾಗಿ ಸಾಕ್ಷಿ ಕೊಡಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

2. ಈ ಕೇಸನ್ನು ರಾಘವೆಂದ್ರ ಸ್ವಾಮಿ ಮಠದವರ ಮೇಲೆ ಒತ್ತುವರಿ ಸಲುವಾಗಿ ನಾವೇ ಹಾಕಿರುತ್ತೇವೆ. ರಾಘವೇಂದ್ರ ಸ್ವಾಮಿ ಮಠದ ಉತ್ತರ ದಿಕ್ಕಿಗೆ ರಸ್ತೆ ಇದೆ. ಪಶ್ಚಿಮಕ್ಕೆ ನಮ್ಮ ಹೊಲ ಸರ್ವೆ ನಂ.606 ಇದೆ. ಪೂರ್ವಕ್ಕೆ ಊರು ಇದೆ. ರಾಘವೇಂದ್ರಸ್ವಾಮಿ ಮಠದ ಆಸ್ತಿ ಎಷ್ಟು ವರ್ಷಗಳಿಂದೆ ಇದೆ ಎಂದು ನನಗೆ ಗೊತ್ತಿಲ್ಲ. ಸುಮಾರು 200-300 ವರ್ಷಗಳಿಂದ ರಾಘವೇಂದ್ರಸ್ವಾಮಿ ಮಠ ಆಸ್ತಿ ಇದೆ ಎಂದರೆ ಸರಿಯಲ್ಲ. ಸುಮಾರು 40-50 ವರ್ಷಗಳಿಗಿಂತ ಮುಂಚೆ ಇರಬಹುದು. 150-200 ವರ್ಷಗಳಿಂದ ಮಠದ ಆರಾದನೆ, ಭಜನೆ ಮಾಡುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸುಮಾರು 40-50 ವರ್ಷಗಳಿಗಿಂತ ಮಠದ ಆರಾದನೆ, ಭಜನೆ ಮಾಡುತ್ತಾ ಬಂದಿರಬಹುದು. ಮಠದ ಆಸ್ತಿಯಲ್ಲಿ ಕಟ್ಟಡ ಕಟ್ಟಲು ಪುರಸಭೆಯವರು ಪರವಾನಿಗೆ ಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. 2008 ಮತ್ತು 2020 ರಲ್ಲಿ ಪುರಸಭೆ ಪರವಾನಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಠದ ಆಸ್ತಿ ಮುದಗಲ್ ಗಾವ್ ಠಾಣಾ ಏರಿಯಾದಲ್ಲಿ ಬರುತ್ತದೆ ಎಂದರೆ ಸರಿ.

3. ದಾವಾ ಆಸ್ತಿ ನಮ್ಮ ಆಸ್ತಿ ಸರ್ವೆ ನಂ.606 ರಲ್ಲಿ ಬರುತ್ತದೆ ಎಂದು ನಾವು ಸರ್ವೆಗೆ ಅರ್ಜಿ ಕೊಟ್ಟಿರುತ್ತೇವೆ. ಸುಮಾರು 7-8 ಬಾರಿ ಅರ್ಜಿ ಕೊಟ್ಟಿರುತ್ತೇವೆ. ಸದರಿ ಅರ್ಜಿಯ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ. ಸರ್ವೆ ನಂ.606 ನಮ್ಮ ಪಿತ್ರಾರ್ಜಿತ

ಆಸ್ತಿಯಾಗಿರುತ್ತದೆ. ನಮ್ಮ ಅಜ್ಜಿಯಿಂದ ನಮ್ಮ ತಂದೆಗೆ ಬರುತ್ತದೆ. ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ. ನಮ್ಮ ಹೊಲದ ಪೂರ್ವಕ್ಕೆ ಊರು ಇದೆ. ಪಶ್ಚಿಮಕ್ಕೆ ರಜಿಯಾ ಬೇಗಂ ರವರ ಹೊಲ ಇದೆ. ಉತ್ತರ ದಿಕ್ಕಿಗೆ ರಸ್ತೆ ಮತ್ತು ದಕ್ಷಿಣ ದಿಕ್ಕಿಗೆ ಸರ್ಕಾರಿ ಗುಡ್ಡ ಇರುತ್ತದೆ. ನಮ್ಮ ಜಮೀನಿಗೆ ಸಂಬಂಧಿಸಿದಂತೆ ಡಿ.ಸಿ ರವರಿಗೆ ಅರ್ಜಿ ಕೊಟ್ಟಿರುತ್ತೇವೆ. ಹೊಲ ಒತ್ತುವರಿ ಮಾಡುತ್ತಿದ್ದಾರೆ ಅಳತೆ ಮಾಡಲು ಡಿ.ಸಿ ರವರಿಗೆ ಅರ್ಜಿ ಕೊಟ್ಟಿರುತ್ತೇವೆ. ಡಿ.ಸಿ ರವರಿಗೆ ಅರ್ಜಿ ಕೊಟ್ಟು 5 ವರ್ಷಗಳಾಗಿರುತ್ತವೆ. ಡಿ.ಸಿ ರವರಿಗೆ ನೀಡಿದ ಅರ್ಜಿಯನ್ನು ನ್ಯಾಯಾಲಯಲದಲ್ಲಿ ಹಾಜರು ಪಡಿಸಿಲ್ಲ. ಡಿ.ಸಿ ರವರಿಗೆ ಕೊಟ್ಟ ಅರ್ಜಿಗೆ ನಾವು ಸಿಕ್ಕ ಹೊಡೆಸಿಕೊಂಡು ಬಂದಿರುವುದಿಲ್ಲ.

4. ಈ ದಾವೆಯನ್ನು ಗ್ಯಾನಪ್ಪ ಮತ್ತು ರಾಮಪ್ಪ ಮಠದವರ ಮೇಲೆ ಹಾಕಿರುತ್ತಾರೆ. ರಾಮಪ್ಪನಿಗೆ 7 ಜನ ಮಕ್ಕಳಿದ್ದಾರೆ. ಅವರೆಂದರೆ ಪರಶುರಾಮ, ಯಲ್ಲಮ್ಮ, ಹುಲಿಗೆಮ್ಮ, ಹುಸೇನಪ್ಪ, ಯಲ್ಲಪ್ಪ, ಹನುಮಂತ ಮತ್ತು ಮುತ್ತಮ್ಮ. ರಾಮಪ್ಪನವರು ಸುಮಾರು ಒಂದುವರೆ ತಿಂಗಳ ಹಿಂದೆ ತೀರಿಕೊಂಡಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.